ಶ್ರೀ ಸಿದ್ದರಾಮಯ್ಯ.—(ಪಶುಸಂಗೊಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಮಂತ್ರಿಗಳು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಅಧ್ಯಕ್ಷರೇ, ಕೆನ್ನಲ್ ಕ್ಲಬ್‌ನವರು, ಪ್ರತಿ ವರ್ಷ ನಮ್ಮ ದೇಶದಲ್ಲಿ ಇಲ್ಲದೇ ಇರತಕ್ಕ ನಾಯಿಗಳನ್ನು ತಂದು ಎಕ್ಸಿಬಿಟಿ ಮಾಡುತ್ತಾರೆ. ಇಂತಹ ನಾಯಿಗಳನ್ನು ಕರ್ನಾಟಕದಲ್ಲಿ ತಂದು, ಸಾಕಿ, ಅವುಗಳ ಉಪಯೋಗ ಪಡೆಯಲು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಮಂತ್ರಿ, ಪಶುವೈದ್ಯ ಸೇವಾ ರಾಜ್ಯಸಚಿವರು) —ಮಾನ್ಯ ಅಧ್ಯಕ್ಷರೇ, ಮುಧೋಳ ತಾಲ್ಲೂಕಿನಲ್ಲಿ ಮಾತ್ರ ಈ ಜಾತಿ ನಾಯಿ ಇದೆ. ಇದು ರಾಜ್ಯಾದ್ಯಂತ ಮತ್ತು ದೇಶಾದ್ಯಂತ ಪ್ರಸಿದ್ಧ ಪಡೆದಿರಬಹುದು. ಅದನ್ನು ಸಂರಕ್ಷಣೆ ಮಾಡಬೇಕೆಂಬುದು, ಸಂತತಿ ಉಳಿಸಿಕೊಳ್ಳಬೇಕೆಂಬುದು ಇಲ್ಲ. ಕೆನ್ನಲ್ ಕ್ಲಬ್‌ನವರು ಸಾಕಿರತಕ್ಕ, ಈ ನಾಯಿಗಳು ಆಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿರಬಹುದು. ಇದು ಮುಧೋಳ ಭಾಗದಲ್ಲಿ ಬೇಟೆ ನಾಯಿಗಳಾಗಿದ್ದು ಬಹಳ ಎದೆಗಾರಿಕೆ ಇರಬಹುದು. ಇವುಗಳು ಸಿಕ್ಕುವುದು ಬಹಳ ದುಭಾರಿ. ಜನ ಸಾಮಾನ್ಯರು ಇವುಗಳನ್ನು ಸಾಕುವುದೂ ಕಷ್ಟವಾಗುತ್ತದೆ. ಇದರ ಬಗ್ಗೆ ಸರ್ಕಾರದ ಚಿಂತನೆ ಮಾಡುವುದು ಕಷ್ಟವಾಗುತ್ತದೆ.

ಶ್ರೀ ತುಂಗಳ್ ಬಿ.ಬುರೆಡ್ಡಿ ವೆಂಕಪ್ಪ.—ಈ ಮುಧೋಳದ ಈ ಬೇಟೆ ನಾಯಿಗಳಿಗೆ ಚಿಕ್ಕಮಗಳೂರು ಮಂತ್ರಿತರ ಭಾಗಗಳಲ್ಲಿ ಬಹಳ ಬೇಡಿಕೆ ಇದೆ. ಆದುದರಿಂದ ಈ ತಳಿಯನ್ನು ಬೆಳೆಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ. ಆ ತಳಿಯ ನಾಯಿ ಸೂಕ್ತವಾದ ನಾಯಿ ಎನ್ನುವುದರಲ್ಲಿ ನನ್ನದು ಎರಡನೇ ಮಾತಿಲ್ಲ. ಅದು ರಾಜ ಮಹಾರಾಜರು ಬೇಟೆಗೆ ಉಪಯೋಗಿಸುವ ನಾಯಿ. ರಾಜಮನೆತನದವರು ವಿದೇಶಿ ತಳಿ ತೆಗೆದುಕೊಂಡು ಬಂದು, ಸ್ಥಳೀಯ ನಾಯಿಗಳ ಜೊತೆಯಲ್ಲಿ ಮಿಲನ ಮಾಡಿದಮೇಲೆ ಬಂದಿರತಕ್ಕ ಸಂತತಿ. ಅದನ್ನು ಬೇಟೆಗೋಸ್ಕರ ಉಪಯೋಗಿಸುವುದು. ಜನಸಾಮಾನ್ಯರು ಬೇಟೆಗೆ ಉಪಯೋಗಿಸುವುದಕ್ಕಾಗುವುದಿಲ್ಲ. ಸಿಕ್ಕುವುದೂ ಕಷ್ಟ, ಮತ್ತು ಇದು ತುಂಬಾ ದುಬಾರಿಯೂ ಆಗಿದೆ. ಸರ್ಕಾರ ಈ ಸಂತತಿಯನ್ನು ಬೆಳೆಸಿ, ಅಭಿವೃದ್ಧಿ ಪಡಿಸುವುದು. ಸಂರಕ್ಷಣೆ ಮಾಡುವ ಅಗತ್ಯವಿಲ್ಲ. ಕೆನ್ನಲ್ ಕ್ಲಬ್‌ನವರು ಕೊಡತಕ್ಕಂಥ ಸಲಹೆಯನ್ನು ಪಡೆಯುವ ಅಗತ್ಯ ಇಲ್ಲ.

ಕೊಳವೆ ಬಾವಿಗಳನ್ನು ತೋಡುವ ಬಗ್ಗೆ ನಿಗದಿ ಪಡಿಸಿರುವ ದರ

*೫೮೫. ಶ್ರೀ ಜಿ ಎಸ್. ಶಿವನಂಜಪ್ಪ (ಗುಬ್ಬಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೊಳವೆ ಬಾವಿಯನ್ನು ತೋಡಲು ಒಂದು ಮೀಟರಿಗೆ ನಿಗದಿ ಪಡಿಸಿದ ಹಣವೆಷ್ಟು ?

ಆ) ಈ ದರಗಳನ್ನು ಯಾವ ಆಧಾರದ ಮೇಲೆ ನಿಗಧಿ ಪಡಿಸಲಾಗಿದೆ. ಹಾಗೂ ಕೊಳವೆಬಾವಿಗಳ ನಿರ್ಮಾಣಗುತ್ತಿಗೆ ಯಾರಿಂದ ನೀಡಲಾಗುತ್ತಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಂತ್ರಿಗಳು)

ಅ) ೧೯೮೫-೮೬ ನೇ ಸಾಲಿನ ದರದ ಪಟ್ಟಿಯಂತೆ ರೂ. ೧೮೫ ರಿಂದ ೧೯೦-೦೦

ಆ) ದರ ಪಟ್ಟಿಗಳನ್ನು ಸಿದ್ಧಪಡಿಸಲು ಪ್ರತಿ ವರ್ಷಕ್ಕೂ ನಿಯಮಿಸಿದ ಸಮಿತಿಗಳು ದತ್ತಕ ಗಳನ್ನು ಪರಿಶೀಲಿಸಿ ಸಂಬಂಧಿಸಿದ ಅಧೀಕ್ಷಕ ಅಭಿಯಂತರಿಗೆ ದರಗಳನ್ನು ಶಿಫಾರಸ್ಸು ಮಾಡುತ್ತೇವೆ.

ಅಧೀಕ್ಷಕ ಅಭಿಯಂತರು ಜಂಟಿ ಸಭೆಯನ್ನು ಕರೆದು ಚರ್ಚಿಸಿ ಸೂಕ್ತ ತಿದ್ದುಪಡಿಗಳೊಂದಿಗೆ, ಈ ದರಗಳಿಗೆ ಒಪ್ಪಿಗೆ ನೀಡುತ್ತಾರೆ.

ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರು ಕೊಳವೆ ಭಾವಿ ನಿರ್ಮಾಣದ ಗುತ್ತಿಗೆಯನ್ನು ಕಾನೂನು ರೀತ್ಯಾ ಕೊಡುವರು.

ಶ್ರೀ ಬಿ. ಎಸ್. ಶಿವನಂಜಪ್ಪ (ಗುಬ್ಬಿ):—ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ, ಒಂದು ಮೀಟರ್‌ಗೆ ನಿಗದಿಪಡಿಸಿದ ಹಣವೆಷ್ಟು ಎಂದು ಕೇಳಿರುವುದಕ್ಕೆ ೧೮೫ ರಿಂದ ೧೯೦ ರೂಪಾಯಿಗಳು ಎಂದು ಹೇಳಿದ್ದಾರೆ. ಆದರ ಪ್ರಕಾರ ಇದು ಬಹುಶಃ ಒಂದು ಅಡಿಗೆ ೬೧ ರೂಪಾಯಿ ಬೀಳಬಹುದು, ಇನ್ನು ೧೯೦ ಎಂದರೆ ೬೩ ರೂಪಾಯಿ ಬೀಳಬಹುದು, ನಮ್ಮ ತುಮಕೂರಿನಲ್ಲಿ ನಾವೆಲ್ಲಾ ಹಾಕಿಸಿರುತ್ತೇವೆ. ೩೫–೪೦ ರೂಪಾಯಿಗಳಿಗೆ ಪ್ರೈವೇಟ್ಸ್‌ನವರು ಬೋರವೆಲ್ ಕೊರೆಯುತ್ತಿದ್ದಾರೆ. ಸರ್ಕಾರದವರು ಈ ರೀತಿಯಾಗಿ ಹೆಚ್ಚಿನ ಹಣ ಏಕೆ ಕೊಟ್ಟಿರ? ಟೆಂಡರ್ ಕರೆಯುವುದಕ್ಕೆ ಇವರಿಗೆ ಏನು ತೊಂದರೆ? ಇದರಿಂದ ಇದಕ್ಕೆ ಸಂಬಂಧಪಟ್ಟ ಇಂಜಿನಿಯರುಗಳು ಮತ್ತು ಅಧಿಕಾರಿಗಳು ಎಷ್ಟು ಬೇಕಾದರೂ ಭ್ರಷ್ಟಾಚಾರ ಮಾಡಿರಬಹುದು ಎನ್ನುವ ಅನುಮಾನ ಬರುತ್ತದೆ. ಇಷ್ಟಿತ್ತು ಖಾಸಗಿಯವರು ೪೦ ರೂಪಾಯಿಗೆ ಎಷ್ಟು ಬೋರ್ ಬೇಕಾದರೂ ಹಾಕುತ್ತಾರೆ. ನಾನು ಕೂಡ ಹಾಕಿಸಿದ್ದೇನೆ. ಈ ರೀತಿ ೪೦ ರೂಪಾಯಿ ರೇಟ್ ಇರುವಾಗ ೬೦ ರೂಪಾಯಿ ಏಕೆ ಖರ್ಚುಮಾಡಬೇಕು?

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರಾದ ಶ್ರೀ ಬಿ. ಎಸ್. ಶಿವನಂಜಪ್ಪನವರು ಹೇಳಿದಾಗ, ಇಷ್ಟು ಕಡಿಮೆ ದರದಲ್ಲಿ ಸಿಗತಕ್ಕ ಕೊಳವೆ ಬಾವಿಗಳ ಯಂತ್ರಗಳು ಯಾವುದಾದರೂ ಬರುತ್ತಾ ಇದ್ದಾರೆ, ಅವುಗಳನ್ನು ಎಷ್ಟು ಸಂಖ್ಯೆಯಲ್ಲಿ ಬಂದರೂ, ಸರ್ಕಾರ ತೆಗೆದು ಕೊಳ್ಳುವುದಕ್ಕೆ ಸಿದ್ಧವಿದೆ.

ಒಟ್ಟು ಸುಮಾರು ೩೦೦ಕ್ಕೂ ಹೆಚ್ಚು ರಿಗ್ಸ್ ಬೇಕಾಗುತ್ತದೆ. ಎಲ್ಲಾ ಕಡೆಯೂ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮುಂಗಿಸಬೇಕು. ಹಾಗೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮಾಡುವಾಗ ಅಲ್ಲಿ ಇಲ್ಲಿ ೧–೨ ಕಡೆ ಏನಾದರೂ ಸಣ್ಣಪುಟ್ಟ ಕೆಲಸಗಳು ಆಗದೇ ಹೋದರೆ ಅದನ್ನು ಇದರೊಂದಿಗೆ ಹೋಲಿಸುವುದಕ್ಕಾಗುವುದಿಲ್ಲ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ದರವನ್ನು ನಿಶ್ಚಯ ಮಾಡಿ ಏನಾದರೂ ಕೆಲಸಗಳನ್ನು ಮಾಡಿಸಿದರೆ ಮಾನ್ಯ ಸದಸ್ಯರು ಆಪಾದನೆ ಮಾಡುತ್ತಾರೆ. ಮಾನ್ಯ ಸದಸ್ಯರು ಬೇರೆ ಆ ರೀತಿಯಾಗಿ ಒಂದು ಭಾವನೆ ತಿಳಿಯುವ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಒಂದು ವಿಷಯ ಇದೆ. ಇದರಲ್ಲಿ ಕೊಟ್ಟಿರತಕ್ಕ ರೀತಿಯಲ್ಲಿ ಒಂದು ಅಡಿಗೆ ೬೧ ರೂಪಾಯಿ ಎಂದಿದೆ. ೧೯೮೪-೮೫ರಲ್ಲಿ ಪರ್‌ಫುಟ್ ೩೫ ರಿಂದ ೪೫ ರೂಪಾಯಿನವರೆಗೆ ಇತ್ತು. ನನಗೆ ಗೊತ್ತಿರುವ ಹಾಗೆ ಆದರ ಹಿಂದೆ ೨೦ ರಿಂದ ೨೫ ರೂಪಾಯಿನವರೆಗೆ ಇತ್ತು. ಈಗ ನೋಡಿದರೆ ಇಷ್ಟು ವ್ಯತ್ಯಾಸವಾಗಿದೆ. ಜೊತೆಗೆ ಯಾವುದೇ ಪರಿಹಾರ ಕಾರ್ಯಕ್ರಮವನ್ನಾಗಲಿ ಅವರ ಮನಸ್ಸಿಗೆ ಬಂದಹಾಗೆ ಕೊಡುವುದಕ್ಕಾಗುವುದಿಲ್ಲ ಅದಕ್ಕೆ ಕೊಟೇಷನ್ ಕರೆಯಬೇಕಾಗುತ್ತದೆ. ಯಾವ ಸಂಸ್ಥೆ ಕಡಿಮೆ ದರದಲ್ಲಿ ಕೊಟೇಷನ್ ಕೊಡುತ್ತದೋ ಈ ಸಂಸ್ಥೆಗೆ ಕೊಡಬೇಕಾಗುತ್ತದೆ. ಹಾಗೆ ಮಾಡದೆ ಇವರು ಹಳೇ ದರದಲ್ಲಿ ಈ ಕೆಲಸವನ್ನು ಏನು ಕೊಟ್ಟಿದ್ದಾರೆ ಇದರಿಂದ ಸರ್ಕಾರದ ಹಣ ಹಾಳು ಮಾಡುವುದಕ್ಕೆ ಕಾರಣವಾಗುವುದಿಲ್ಲವೇ? ಕೊಟೇಷನ್ ಕರೆದು ಕಡಿಮೆ ದರದಲ್ಲಿ ಆ ಕೆಲಸಗಳನ್ನು ಮಾಡಿಸಿದರೆ ಉಳಿದ ಹಣದಲ್ಲಿ ಬೇರೆ ಕೆಲಸಕ್ಕೆ ಇಟ್ಟುಕೊಳ್ಳಬಹುದಲ್ಲ ಪಿ. ಡಬ್ಲ್ಯು. ಡಿ. ದರದಲ್ಲಿ ಕೊಟ್ಟು ಎಸ್. ಪಿ. ಡಿ. ಸಿ. ಅವರ ಮುಖಾಂತರ ವಾಗಲಿ ಅಥವಾ ಯಾವುದೇ ನಿಮ್ಮ ಇಲಾಖೆಯ ಮುಖಾಂತರವಾಗಲಿ ಕೆಲಸ ಮಾಡಿಸಿದ್ದೀರಾ? ಅದು ಬಿಟ್ಟು ಯಾವುದೋ ಖಾಸಗೀ ಸಂಸ್ಥೆಗೆ ಒಂದು ಮೀಟರ್‌ಗೆ ೬೦–೬೧ ರೂಪಾಯಿಗಳ ದರದಲ್ಲಿ ಮಾಡಿಸುವುದು ಸರಿಯೇ? ನಿಮ್ಮ ಉತ್ತರದಲ್ಲಿ ಒಂದು ಅಡಿಗೆ ೧೬೦ರಿಂದ ೧೮೦ ರೂಪಾಯಿನವರೆಗೆ ಆಗುತ್ತದೆ ಎಂದು ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ ಇದರಲ್ಲಿ ಇನ್ನೂ ಅನೇಕ ವಿಚಾರಗಳು ಅಡಗಿರುವುದರಿಂದ ಇದಕ್ಕೆ ಒಂದು ಪ್ರತ್ಯೇಕವಾದ ಕಾಲ ನಿಗದಿ ಮಾಡುವುದರಲ್ಲಿ ಅರ್ಥ ಇದೆ.

ಅಧ್ಯಕ್ಷರು :—ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನೋಟೀಸ್ ಕೊಡಿ.

ಶ್ರೀ ಎಸ್. ಬಂಗಾರಪ್ಪ :—ಕೊಡುತ್ತೇನೆ.